# ಪದ್ಯ ಭಾಗ

## 1. ಹೊಸಹಾಡು – ಕಯ್ಯಾರ ಕಿಞ್ಞಣ್ಣ ರೈ

### ಕೃತಿಕಾರರ ಪರಿಚಯ

ಕಯ್ಯಾರ ಕಿಞ್ಞಣ್ಣ ರೈ ಅವರು ಕ್ರಿ ಶ 1915 ರಲ್ಲಿ **ಕಾಸರಗೋಡು** ಜಿಲ್ಲೆಯ ಕಯ್ಯಾರ ಗ್ರಾಮದಲ್ಲಿ ಜನಿಸಿದರು. ಶ್ರೀಮುಖ, ಐಕ್ಯಗಾನ, ಪುನರ್ನವ ಚೇತನ ಮತ್ತು ಕೊರಗ, ಗಂಧವತಿ ಕವನ ಸಂಕಲನಗಳನ್ನು, ವಿರಾಗಿಣಿ ನಾಟಕವನ್ನು ರಚಿಸಿದ್ದಾರೆ. ಅನ್ನದೇವರು ಮತ್ತು ಇತರೆ ಕಥೆಗಳು **ಸಣ್ಣಕಥಾ** ಸಂಕಲನ, ರತ್ನಾಕರ, ಪರಶುರಾಮ, ಎ. ಬಿ. ಶೆಟ್ಟಿ – ಜೀವನ ಚರಿತ್ರೆ, ದುಡಿತವೇ ನನ್ನ ದೇವರು– ಆತ್ಮಕಥೆ, ಗೋವಿಂದ ಪೈ – ಸ್ಮೃತಿ ಕೃತಿ, ಸಾಹಿತ್ಯ ದೃಷ್ಟಿ – ವಿಮರ್ಶಾ ಕೃತಿ, ಪಂಚಮಿ – ಅನುವಾದ ಕೃತಿ.

ಶ್ರೀಯುತರಿಗೆ 1969ರಲ್ಲಿ **ಕರ್ನಾಟಕ ಸಾಹಿತ್ಯ ಅಕಾಡೆಮಿ ಪ್ರಶಸ್ತಿ**, 2005ರಲ್ಲಿ **ಆಳ್ವಾಸ್ ನುಡಿಸಿರಿ ಪ್ರಶಸ್ತಿ**, 2006ರಲ್ಲಿ ನಾಡೋಜ ಪ್ರಶಸ್ತಿ ಸೇರಿದಂತೆ ಹಲವು ಪ್ರಶಸ್ತಿ ಗೌರವಗಳು ಲಭಿಸಿವೆ.

ಪ್ರಸ್ತುತ ಪದ್ಯವನ್ನು ಕಯ್ಯಾರ ಕಿಞ್ಞಣ್ಣ ರೈ ಅವರು ಸಂಪಾದಿಸಿರುವ **ಶತಮಾನದ ಗಾನ** ಕವನಸಂಕಲನ (ಪುಟ. 18–20)ದಿಂದ ಆಯ್ದು ಸಂಪಾದಿಸಿ ನಿಗದಿಪಡಿಸಿದೆ.



### ಆಶಯ ಭಾವ

ಬದುಕಿಗೆ ಹೊಸ ತಿರುವನ್ನು ನೀಡಬಲ್ಲ, ಹೊಸ ಆಶಯವನ್ನು, ಜೀವನದ ಗತಿಯನ್ನು ಬದಲಿಸಿ ಹೊಸ ಹುರುಪನ್ನು ತುಂಬಬಲ್ಲ, ಹಳೆಯ ಮೌಢ್ಯವನ್ನು ಕಡಿದೊಗೆದು ಹೊಸ ಭಾವನೆಗಳನ್ನು ಸೃಜಿಸಬಲ್ಲ ಹೊಸ ಹಾಡನ್ನು ಹಾಡಬೇಕು. ಆ ಹಾಡು ಎಲ್ಲರಲ್ಲೂ ಕ್ರಾಂತಿಯನ್ನುಂಟು ಮಾಡಬೇಕು. ಅದರ ಮಾರ್ದನಿಗಳು ಭೂಮಿ–ಆಕಾಶದಲ್ಲಿ ತುಂಬಬೇಕು. ಎಲ್ಲ ಕೀಳರಿಮೆಗಳನ್ನು ಕಡಿದೊಗೆದು, ಹೊಸ ಹುರುಪನ್ನು ತುಂಬುವ ಹಾಡು ಇದಾಗಿದೆ. ಇಂತಹ ಸ್ಫೂರ್ತಿಯ ಚಿಲುಮೆಯಾಗುವ ಹಾಡನ್ನು ಹಾಡಬೇಕು, ಅದು ನಿತ್ಯ ನೂತನವಾಗಿರಬೇಕೆಂಬುದು ಪದ್ಯದ ಆಶಯವಾಗಿದೆ.

### ಪದಗಳ ಅರ್ಥ

ಕಲಕಂಠ – ಇಂಪಾದ ಧ್ವನಿ
ತೀವ್ರ – ಹರಿತ, ರಭಸ
ಪದತಳ – ಕಾಲಿನ ಕೆಳಗೆ
ಮಸಗು – ಹರಡು
ಲೋಕಾಂತ – ಲೋಕಗಳನ್ನು ಮೀರಿದ
ತೆರೆ – ತರಂಗ, ಅಲೆ
ನಭ – ಆಕಾಶ
ಬೆನ್ನಟ್ಟು – ಓಡಿಸಿಕೊಂಡು ಹೋಗು
ಮಾರ್ದನಿ – ಪ್ರತಿಧ್ವನಿ
ಹಿಮಾದ್ರಿ – ಹಿಮಪರ್ವತ

**ಅ) ಕೊಟ್ಟಿರುವ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿ.**

1. ಕವಿ ಎಂತಹ ಹಾಡು ಹಾಡಬೇಕೆಂದು ಬಯಸುವರು?
   ಉತ್ತರ : ನವಭಾವ, ನವಜೀವನ, ನವಶಕ್ತಿ ತುಂಬಿಸುವ ಹಾಡನ್ನು ಹಾಡಬೇಕು ಎಂದು ಕವಿ ಬಯಸುವರು.
2. ವೀರಧ್ವನಿ ಹೇಗೆ ಏರಬೇಕು?
   ಉತ್ತರ : ತೀವ್ರತರಹ ಗಂಭೀರ ಭಾವನೆಯ ತೆರೆ ಮಸಗಿ ವೀರ ಧ್ವನಿ ಏರಬೇಕು.
3. ಕಡಿದೊಗೆಯಬೇಕಾದ ಪಾಶಗಳು ಯಾವುವು?
   **ಉತ್ತರ :** ಜಾತಿ, ಕುಲ, ಮತ, ಧರ್ಮ ಈ ಪಾಶಗಳನ್ನು ಕಡಿದೊಗೆಯಬೇಕು.
4. ಹಾಡು ನುಡಿಗುಂಡುಗಳು ಯಾವುದರ ಬೆನ್ನಟ್ಟಬೇಕು?

**ಉತ್ತರ** : ಹಾಡಿನ ನುಡಿಗುಂಡುಗಳು ಭಯದ ಬೆನ್ನಟ್ಟಬೇಕು.

5. ಬಾನು ಬುವಿ ಯಾವುದರಿಂದ ಬೆಳಗಬೇಕು?

**ಉತ್ತರ** : ಜಡನಿದ್ರೆಯಿಂದ ಸಿಡಿದೆದ್ದು ವೀರ ಅಟ್ಟಹಾಸದಲಿ ಬಾನು ಮತ್ತು ಭುವಿಯು ಬೆಳಗಬೇಕು.

**ಆ) ಕೊಟ್ಟಿರುವ ಪ್ರಶ್ನೆಗಳಿಗೆ ಮೂರು – ನಾಲ್ಕು ವಾಕ್ಯದಲ್ಲಿ ಉತ್ತರಿಸಿ.**

1. ಕವಿ ಎಂತಹ ಹಾಡನ್ನು ಹಾಡಿದಾಗ ವೀರಧ್ವನಿಯೇರಬೇಕು ಎಂದು ಬಯಸುತ್ತಾರೆ?

**ಉತ್ತರ** : ಬದುಕಿಗೆ ಹೊಸ ತಿರುವನ್ನು ನೀಡಬಲ್ಲ, ಹೊಸ ಆಶಯವನ್ನು, ಜೀವನದ ಗತಿಯನ್ನು ಬದಲಿಸಿ ಹೊಸ ಹುರುಪನ್ನು ತುಂಬಬಲ್ಲ, ಹೊಸ ಭಾವನೆ, ಹೊಸ ಜೀವನ ಹಾಗೂ ಹೊಸ ಶಕ್ತಿ ತುಂಬಿ ತುಳುಕುವ ಹಾಡನ್ನು ಹಾಡಬೇಕು, ಈ ಹಾಡನ್ನು ಗಂಭೀರವಾದ ಭಾವನೆಗಳಿಂದ ಹಾಡಬೇಕು. ಆಗ ವೀರಧ್ವನಿ ಮುಗಿಲೆತ್ತರಕ್ಕೆ ಏರಬೇಕು ಎಂದು ಕವಿ ಬಯಸುತ್ತಾರೆ.

2. ಕವಿ ಎಂತಹ ಹಾಡು ಗುಡುಗಬೇಕು ಎಂದು ಆಶಿಸುತ್ತಾರೆ?

**ಉತ್ತರ** : ಹಳೆಯ ಮೌಢ್ಯವನ್ನು ಕಡಿದೊಗೆದು ಹೊಸ ಭಾವನೆಗಳನ್ನು ಸೃಜಿಸಬಲ್ಲ ಹೊಸ ಹಾಡನ್ನು ಹಾಡಬೇಕು. ಜಾತಿ, ಕುಲ, ಮತ, ಧರ್ಮ ಪಾಶಗಳನ್ನು ಕಡಿದೊಗೆಯಬೇಕು. ಸ್ವಾಭಿಮಾನದಿಂದ ಆತ್ಮವಿಶ್ವಾಸದಿಂದ ಎದೆಯೆತ್ತಿ ಹಾಡನ್ನು ಹಾಡಬೇಕು. ಆ ಹಾಡು ಯುಗಯುಗ ಕಳೆದರೂ, ಲೋಕ ಲೋಕಗಳ ಆಚೆಯೂ ಗುಡುಗಿನ ರೀತಿಯಲ್ಲಿ ಪ್ರತಿಧ್ವನಿಸಬೇಕು ಎಂದು ಕವಿ ಆಶಿಸುತ್ತಾರೆ.

3. ಈ ಹಾಡು ಹೊಸತು ಎಂದು ಕವಿ ಹೇಳಲು ಕಾರಣವೇನು?

**ಉತ್ತರ** : "ಜಯಜನನಿ ಶಿರವೆತ್ತಿ ವೀರಭರವಸೆಯಿಂದ ಹೊಸಹಾಡ ಕೇಳಿ ನೋಡು; ಇದೋ ಮೊದಲು ಮುನ್ನಿಲ್ಲ– ಮುಗಿದುದಂದಿನ ಪಾಡು ಹೊಸತಿಂದು ಹೊಸತು ಹಾಡು" ಕವಿ ವೀರ ಭರವಸೆಯನ್ನು ಮೂಡಿಸುವ ಹಾಡನ್ನು ಒಮ್ಮೆ ಕೇಳಿ ನೋಡಬೇಕೆಂದು ಜಗಜ್ಜನನಿಯಲ್ಲಿ ಪ್ರಾರ್ಥಿಸುತ್ತಾರೆ. ಏಕೆಂದರೆ ಹಾಡಿನಲ್ಲಿ ಅಂದಿನ ಪಾಡು ಮುಗಿದು, ಇಂದು ಹೊಸ ಹುರುಪಿನೊಂದಿಗೆ ಹೊಸ ಹಾಡನ್ನು ಹಾಡುತ್ತಿದ್ದರೆ. ಆದ್ದರಿಂದ ಕವಿ ಈ ಹಾಡು ಹೊಸದು ಎಂದು ಹೇಳಿದ್ದಾರೆ.

**ಇ) ಕೊಟ್ಟಿರುವ ಪ್ರಶ್ನೆಗೆ ಎಂಟು – ಹತ್ತು ವಾಕ್ಯಗಳಲ್ಲಿ ಉತ್ತರಿಸಿ.**

1. ಹೊಸಹಾಡು ಪದ್ಯದ ಸಾರಾಂಶವನ್ನು ನಿಮ್ಮ ಮಾತುಗಳಲ್ಲಿ ಬರೆಯಿರಿ.

**ಉತ್ತರ** : ಬದುಕಿಗೆ ಹೊಸ ತಿರುವನ್ನು ನೀಡಬಲ್ಲ, ಹೊಸ ಆಶಯವನ್ನು, ಜೀವನದ ಗತಿಯನ್ನು ಬದಲಿಸಿ ಹೊಸ ಹುರುಪನ್ನು ತುಂಬಬಲ್ಲ, ಹಳೆಯ ಮೌಢ್ಯವನ್ನು ಕಡಿದೊಗೆದು ಹೊಸ ಭಾವನೆಗಳನ್ನು ಸೃಜಿಸಬಲ್ಲ ಹೊಸ ಹಾಡನ್ನು ಹಾಡಬೇಕು. ಆ ಹಾಡು ಎಲ್ಲರಲ್ಲೂ ಕ್ರಾಂತಿಯನ್ನುಂಟು ಮಾಡಬೇಕು. ಅದರ ಮಾರ್ದನಿಗಳು ಭೂಮಿ–ಆಕಾಶದಲ್ಲಿ ತುಂಬಬೇಕು. ಎಲ್ಲ ಕೀಳರಿಮೆಗಳನ್ನು ಕಡಿದೊಗೆದು, ಹೊಸ ಹುರುಪನ್ನು ತುಂಬುವ ಹಾಡು ಇದಾಗಿದೆ. ಹೊಸಹಾಡು ಪ್ರಕೃತಿ ಜೀವನದ ಕಣಕಣದಲ್ಲೂ ಹೇಗೆ ಸಮ್ಮಿಳಿತಗೊಂಡಿದೆ ಎಂದು ಸೊಗಸಾಗಿ ವರ್ಣಿಸಿದ್ದಾರೆ. ಹೊಸಭಾವನೆ. ಹೊಸಜೀವನ ಹಾಗೂ ಹೊಸ ಶಕ್ತಿಯಿಂದ ತುಂಬಿ ತುಳುಕುವ ಹಾಡನ್ನು ಒಮ್ಮೆಯಾದರು ಹಾಡಬೇಕು ಹರಿತವಾದ ಗಂಭೀರವಾದ ಭಾವನೆಗಳು ಅಲೆಅಲೆಯಾಗಿ ಹರಡುವ ರೀತಿಯಲ್ಲಿ ವೀರಧ್ವನಿಯು ಮುಗಿಲೆತ್ತರಕ್ಕೆ ಏರಬೇಕು ಜಾತಿ, ಕುಲ, ಧರ್ಮ, ಮತ ಪಾಶಗಳನ್ನು ಕಡಿದೊಗೆಯಬೇಕು ಎದೆಯುಬ್ಬಿಸಿ ಆತ್ಮವಿಶ್ವಾಸದಿಂದ ಸ್ವಾಭಿಮಾನದಿಂದ ಹಾಡನ್ನು ಹಾಡಬೇಕು ಆ ಹಾಡು ಅತ್ಯುನ್ನತವೂ ಶ್ರೇಷ್ಟವೂ ಆದ ಹಿಮಾಲಯದ ಶಿಖರವನ್ನೇರಿ ಹಾಡಬೇಕು. ಆಹಾಡಿನ ನುಡಿಗುಂಡುಗಳು ಹತ್ತು ದಿಕ್ಕುಗಳಲ್ಲಿ ಹಾರಿ ಶತ್ರುಗಳಲ್ಲಿ ಭಯವನ್ನುಂಟುಮಾಡಿ ಅವರನ್ನು ಓಡಿಸಿ ಮಾರ್ದನಿಸಬೇಕು. ಇಂತಹ ಸ್ಫೂರ್ತಿಯ ಚಿಲುಮೆಯಾಗುವ ಹಾಡನ್ನು ಹಾಡಬೇಕು, ಅದು ನಿತ್ಯ ನೂತನವಾಗಿರಬೇಕೆಂಬುದು ಈ ಪದ್ಯದ ಸಾರಾಂಶವಾಗಿದೆ.

**ಈ) ಸಂದರ್ಭಸಹಿತ ಸ್ವಾರಸ್ಯವನ್ನು ವಿವರಿಸಿ.**

1. "ತೀವ್ರತರ ಗಂಭೀರ ಭಾವನೆಯ ತೆರೆ ಮಸಗಿ ವೀರಧ್ವನಿಯೇರಬೇಕು"

**ಆಯ್ಕೆ** : ಈ ವಾಕ್ಯವನ್ನು **ಕಯ್ಯಾರ ಕಿಞ್ಞಣ್ಣ ರೈ** ಅವರು ಸಂಪಾದಿಸಿರುವ **'ಶತಮಾನದ ಗಾನ'** ಕವನಸಂಕಲನ ದಿಂದ ಆಯ್ದು **'ಹೊಸಹಾಡು'** ಎಂಬ ಪದ್ಯಭಾಗದಿಂದ ಆರಿಸಲಾಗಿದೆ.

**ಸಂದರ್ಭ** : ಈ ಮಾತನ್ನು ಕವಿ ಹೇಳಿದ್ದಾರೆ. ಹೊಸಹಾಡು ನವಭಾವ ನವಜೀವನ, ನವಶಕ್ತಿಯನ್ನು ತುಂಬಿಸುವಂತಿರಬೇಕು ಎಂದು ಹೇಳುವ ಸಂದರ್ಭದಲ್ಲಿ ಕವಿ ಈ ಮಾತನ್ನು ಹೇಳಿದ್ದಾರೆ.

**ಸ್ವಾರಸ್ಯ** : ಹಾಡಿಗೆ ಮನುಷ್ಯನ ಬದುಕಿಗೆ ಹೊಸ ತಿರುವನ್ನು ಕೊಡುವ ಶಕ್ತಿಯಿದೆ. ಅಂತಹ ಹಾಡನ್ನು ಗಂಭೀರವಾದ ಭಾವನೆಗಳಿರಬೇಕು ವೀರಧ್ವನಿಯನ್ನು ಮೂಡಿಸಬೇಕು ಎಂಬುದು ಸ್ವಾರಸ್ಯಕರವಾಗಿದೆ.

2. "ಯುಗಯುಗಗಳಾಚೆಯಲಿ ಲೋಕಲೋಕಾಂತರದಲಿ ಆ ಹಾಡು ಗುಡುಗಬೇಕು"

**ಆಯ್ಕೆ :** ಈ ವಾಕ್ಯವನ್ನು **ಕಯ್ಯಾರ ಕಿಞ್ಞಣ್ಣ ರೈ** ಅವರು ಸಂಪಾದಿಸಿರುವ **'ಶತಮಾನದ ಗಾನ'** ಕವನಸಂಕಲನ ದಿಂದ ಆಯ್ದು **'ಹೊಸಹಾಡು'** ಎಂಬ ಪದ್ಯಭಾಗದಿಂದ ಆರಿಸಲಾಗಿದೆ.

**ಸಂದರ್ಭ :** ಈ ಮಾತನ್ನು ಕವಿ ಹೇಳಿದ್ದಾರೆ. ಜಾತಿ, ಕುಲ, ಮತ ಧರ್ಮಗಳ ಪಾಶಗಳನ್ನು ಕಡಿದೊಗೆದು ಹಾಡನ್ನು ಹಾಡಬೇಕು ಈ ಹಾಡು ಯುಗಯುಗಗಳಾಚೆ, ಲೋಕಲೋಕಗಳಾಚೆ ಕೇಳಬೇಕು ಎಂದು ಹೇಳುವ ಸಂದರ್ಭದಲ್ಲಿ ಈ ಮಾತು ಬಂದಿದೆ.

**ಸ್ವಾರಸ್ಯ :** ಸಮಾಜದಲ್ಲಿರುವ ಜಾತಿ, ಕುಲ, ಮತ, ಧರ್ಮಗಳ ಪಾಶಗಳು ನಾಶವಾಗಿ, ಮನುಜ ವ್ಮತದ ಹಾಡು ಕೇಳಬೇಕು ಎಂಬ ಕವಿಯ ಭಾವನೆಯು ಸ್ವಾರಸ್ಯಕರವಾಗಿದೆ.

3. "ಜಡನಿದ್ರೆ ಸಿಡಿದೆದ್ದ ವೀರಾಟ್ಟಹಾಸದಲಿ ಬಾನು ಬುವಿ ಬೆಳಗಬೇಕು"

**ಆಯ್ಕೆ :** ಈ ವಾಕ್ಯವನ್ನು **ಕಯ್ಯಾರ ಕಿಞ್ಞಣ್ಣ ರೈ** ಅವರು ಸಂಪಾದಿಸಿರುವ **'ಶತಮಾನದ ಗಾನ'** ಕವನಸಂಕಲನ ದಿಂದ ಆಯ್ದು **'ಹೊಸಹಾಡು'** ಎಂಬ ಪದ್ಯಭಾಗದಿಂದ ಆರಿಸಲಾಗಿದೆ.

**ಸಂದರ್ಭ :** ಈ ಮಾತನ್ನು ಕವಿ ಹೇಳಿದ್ದಾರೆ. ನಾವು ಜಡನಿದ್ರೆಯಿಂದ ಎಚ್ಚರಗೊಂಡು ವೀರ ಅಟ್ಟಹಾಸದಲ್ಲಿ ಭಾನು ಭುವಿ ಬೆಳಗಬೇಕು ಹೀಗೆ ಹೊಸ ಹಾಡು ಹೇಗೆ ಮತ್ತು ಯಾವುದನ್ನು ಬೆಳಗಬೇಕು ಎಂದು ವಿವರಿಸುವ ಸಂದರ್ಭದಲ್ಲಿ ಈ ಮಾತು ಬಂದಿದೆ.

**ಸ್ವಾರಸ್ಯ :** ಸಮಾಜದಲ್ಲಿ ಬದಲಾವಣೆಯ ಗಾಳಿ ಬೀಸಬೇಕಾದರೆ ಮೊದಲು ಹಳೆಯ ಮೌಢ್ಯಗಳು ದೂರವಾಗಬೇಕು ಎಂಬುದು ಸ್ವಾರಸ್ಯಕರವಾಗಿದೆ.

4. "ನಡೆನುಡಿಗಳೆಡೆಯಲ್ಲಿ ಪದತಾಳ ಗತಿಯಲ್ಲಿ ಕ್ರಾಂತಿಕಿಡಿ ಕೆರಳಬೇಕು"

**ಆಯ್ಕೆ :** ಈ ವಾಕ್ಯವನ್ನು **ಕಯ್ಯಾರ ಕಿಞ್ಞಣ್ಣ ರೈ** ಅವರು ಸಂಪಾದಿಸಿರುವ **'ಶತಮಾನದ ಗಾನ'** ಕವನಸಂಕಲನ ದಿಂದ ಆಯ್ದು **'ಹೊಸಹಾಡು'** ಎಂಬ ಪದ್ಯಭಾಗದಿಂದ ಆರಿಸಲಾಗಿದೆ.

**ಸಂದರ್ಭ :** ಈ ಮಾತನ್ನು ಕವಿ ಹೇಳಿದ್ದಾರೆ. ಹೊಸ ಹಾಡಿನ ಗತಿ, ಪ್ರಗತಿ ಹೇಗಿರಬೇಕು, ಆ ಹಾಡು ಯುಗಯುಗ ಕಳೆದರೂ, ಲೋಕ ಲೋಕಗಳ ಆಚೆಯೂ ಗುಡುಗಿನ ರೀತಿಯಲ್ಲಿ ಪ್ರತಿಧ್ವನಿಸಬೇಕು ಕ್ರಾಂತಿಯ ಕಿಡಿಯನ್ನು ಹೊತ್ತಿಸಬೇಕು ಎಂದು ಹೇಳುವ ಸಂದರ್ಭರ್ಧದಲ್ಲಿ ಈ ಮಾತು ಬಂದಿದೆ.

**ಸ್ವಾರಸ್ಯ :** ಹಾಡು ಕ್ಷಂತಿಕಾರಿಯಾಗಿದ್ದರೇ ಮಾತ್ರ ಜಡವಾದ ಜನರ ಮನಸ್ಸಿನಲ್ಲಿ ಜಾಗೃತಿಯನ್ನ ಮೂಡಿಸಲು ಸಾಧ್ಯ ಎಂಬುದು ಸ್ವಾರಸ್ಯಕರವಾಗಿ ಕವಿ ಹೇಳಿದ್ದಾರೆ.

5. "ಇದೋ ಮೊದಲು ಮುನ್ನಿಲ್ಲ-ಮುಗಿದುದಂದಿನ ಪಾಡು ಹೊಸತಿಂದು ಹೊಸತು ಹಾಡು"

**ಆಯ್ಕೆ :** ಈ ವಾಕ್ಯವನ್ನು **ಕಯ್ಯಾರ ಕಿಞ್ಞಣ್ಣ ರೈ** ಅವರು ಸಂಪಾದಿಸಿರುವ **'ಶತಮಾನದ ಗಾನ'** ಕವನಸಂಕಲನ ದಿಂದ ಆಯ್ದು **'ಹೊಸಹಾಡು'** ಎಂಬ ಪದ್ಯಭಾಗದಿಂದ ಆರಿಸಲಾಗಿದೆ.

**ಸಂದರ್ಭ :** ವೀರ ಭರವಸೆಯನ್ನು ಮೂಡಿಸುವ ಹಾಡನ್ನು ಒಮ್ಮೆ ಕೇಳಿ ನೋಡಬೇಕೆಂದು ಜಗಜ್ಜನನಿಯಲ್ಲಿ ಪ್ರಾರ್ಥಿಸುತ್ತಾರೆ. ಏಕೆಂದರೆ ಹಾಡಿನಲ್ಲಿ ಅಂದಿನ ಪಾಡು ಮುಗಿದು, ಇಂದು ಹೊಸ ಹುರುಪಿನೊಂದಿಗೆ ಹೊಸ ಹಾಡನ್ನು ಹಾಡಬೇಕು ಎಂದು ಕವಿ ಹೇಳುವ ಸಂದರ್ಭವಾಗಿದೆ.

**ಸ್ವಾರಸ್ಯ :** ಹಿಂದಿನ ಕಷ್ಟಗಳೆಲ್ಲ ಮುಗಿದು ಹೊಸ ಬದುಕು ಪ್ರಾರಂಭವಾಗಿದೆ ಎಂಬುದು ಸ್ವಾರಸ್ಯಕರವಾಗಿದೆ.

## ಉ) ಮೊದಲೆರಡು ಪದಗಳಿಗಿರುವ ಸಂಬಂಧದಂತೆ ಮೂರನೆಯ ಪದಕ್ಕೆ ಸಂಬಂಧಿಸಿದ ಪದವನ್ನು ಬರೆಯಿರಿ.

1. ಧ್ವನಿ : ದನಿ :: ಯುಗ : ________
2. ಲೋಕಾಂತರ : ಸವರ್ಣದೀರ್ಘ ಸಂಧಿ :: ಉನ್ನತೋನ್ನತ : ________
3. ಬಾನು : ಆಕಾಶ :: ಭಾನು : ________

**ಸರಿ ಉತ್ತರಗಳು**

**1. ಜುಗ 2. ಗುಣಸಂಧಿ 3. ಸೂರ್ಯ**

## ಊ) ಕೊಟ್ಟಿರುವ ನಾಲ್ಕು ಆಯ್ಕೆಗಳಲ್ಲಿ ಸರಿಯಾದ ಉತ್ತರವನ್ನು ಆರಿಸಿ ಬರೆಯಿರಿ.

1. 'ಹೊಸಹಾಡು' ಪದ್ಯದ ಆಕರ ಗ್ರಂಥ ________
   (ಪುನರ್ನವ, ಚೇತನ, ಕೊರಗ, ಶತಮಾನದಗಾನ)
2. 'ಹೊಸಹಾಡು' ಪದ್ಯದ ಕವಿ ________
   (ಗೋಪಾಲಕೃಷ್ಣ ಅಡಿಗ, ಕಯ್ಯಾರ ಕಿಞ್ಞಣ್ಣ ರೈ, ದ.ರಾ. ಬೇಂದ್ರೆ, ಜಿ. ಎಸ್. ಶಿವರುದ್ರಪ್ಪ)
3. ಉನ್ನತೋನ್ನತ ________ ಶಿಖರವನೇರಿ ಹಾಡಲ್ಲಿ ಹಾಡಬೇಕು.

(ಹಿಮಾಲಯ, ಘನಹಿಮಾದ್ರಿ, ಸಹ್ಯಾದ್ರಿ, ವಿಂಧ್ಯಾ)

4. .__________________ ಧರ್ಮಪಾಶಗಳ ಕಡಿದೊಗೆದು ಎದೆಹಿಗ್ಗಿ ಹಾಡಬೇಕು.

(ಜಾತಿ–ಕುಲ–ಮತ, ಮೇಲು–ಕೀಳು, ಬಡವ–ಬಲ್ಲಿದ, ಹಳ್ಳಿ–ಪಟ್ಟಣ)

ಸರಿ ಉತ್ತರಗಳು.

1. ಶತಮಾನದಗಾನ
2. ಕಯ್ಯಾರ ಕಿಞ್ಞಣ್ಣ ರೈ,
3. ಘನಹಿಮಾದ್ರಿ,
4. ಜಾತಿ–ಕುಲ–ಮತ,

**ಭಾಷಾ ಚಟುವಟಿಕೆ**

1. ಅಲಂಕಾರದ ಎರಡು ವಿಧಗಳನ್ನು ಹೆಸರಿಸಿ.

   **ಉತ್ತರ** : ಅಲಂಕಾರದಲ್ಲಿ ಎರಡು ವಿಧ ಅದು **ಅರ್ಥಾಲಂಕಾರ ಮತ್ತು ಶಬ್ದಾಲಂಕಾರ**.

2. "ಬಾನಿನಲಿ ಗಾಳಿಪಟಗಳು ಹಕ್ಕಿಗಳಂತೆ ಹಾರಾಡುತ್ತಿದ್ದವು" – ಇಲ್ಲಿರುವ ಅಲಂಕಾರವನ್ನು ಗುರುತಿಸಿ, ಲಕ್ಷಣದೊಂದಿಗೆ ಸಮನ್ವಯಗೊಳಿಸಿ.

| | | |
|---|---|---|
| ಅಲಂಕಾರ | : | ಉಪಮಾಲಂಕಾರ |
| ಉಪಮೇಯ | : | ಬಾನಿನಲ್ಲಿ ಗಾಳಿಪಟಗಳು |
| ಉಪಮಾನ | : | ಹಕ್ಕಿಗಳು |
| ಉಪಮಾವಾಚಕ | : | ಅಂತೆ |
| ಸಮಾನ ಧರ್ಮ | : | ಹಾರಾಡುವುದು. |
| ಸಮನ್ವಯ | : | ಉಪಮೇಯವಾದ **ಬಾನಿನಲ್ಲಿ ಗಾಳಿಪಟಗಳನ್ನು** ಉಪಮಾನವಾದ **ಹಕ್ಕಿಗಳಿಗೆ** ಹೋಲಿಸಿ ವರ್ಣಿಸಲಾಗಿದೆ. **ಅಂತೆ** ಎಂಬ ಉಪಮಾವಾಚಕ ಪದವಿದ್ದು, ಹಾರಾಡುತ್ತಿದ್ದವು ಎಂಬ ಸಮಾನಧರ್ಮ ಇರುವ್ಯದರಿಂದ ಇದು **ಉಪಮಾಲಂಕಾರ**. |

**ಇ) ಕೊಟ್ಟಿರುವ ಪದ್ಯಭಾಗವನ್ನು ಪೂರ್ಣಗೊಳಿಸಿ ಕಂಠಪಾಠ ಮಾಡಿರಿ.**

ನವಭಾವ–ನವಜೀವ–ನವಶಕ್ತಿ ತುಂಬಿಸುವ
ಹಾಡೊಮ್ಮೆ ಹಾಡಬೇಕು;
ತೀವ್ರತರ ಗಂಭೀರ ಭಾವನೆಯ ತೆರೆ ಮಸಗಿ
ವೀರಧ್ವನಿಯೇರಬೇಕು;

ಜಾತಿ–ಕುಲ–ಮತ–ಧರ್ಮ ಪಾಶಗಳ ಕಡಿದೊಗೆದು
ಎದೆಹಿಗ್ಗಿ ಹಾಡಬೇಕು;
ಯುಗಯುಗಗಳಾಚೆಯಲಿ ಲೋಕಲೋಕಾಂತದಲಿ
ಆ ಹಾಡು ಗುಡುಗಬೇಕು;

ಉನ್ನತೋನ್ನತ ಘನ ಹಿಮಾದ್ರಿ ಶಿಖರವನೇರಿ
ಹಾಡಲ್ಲಿ ಹಾಡಬೇಕು;
ಹಾಡು ನುಡಿಗುಂಡುಗಳು ಹಾರಿ ದಶದಿಕ್ಕಿನಲಿ
ಭಯದ ಬೆನ್ನಟ್ಟಬೇಕು;